ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 6–5–2015

# ಪತ್ರಿಕಾ ಆಮಂತ್ರಣ

| | | | |
|---|---|---|---|
| 1. | ನೂತನ ಜವಳಿ ನೀತಿ : ಒಂದು ದಿನದ ಕಾರ್ಯಾಗಾರ ಹಾಗೂ ಟೆಕ್ಸಿಲ್ – 2015 ರ ಉದ್ಘಾಟನಾ ಸಮಾರಂಭ.<br><br>ಉದ್ಘಾಟನೆ:<br><br>ಶ್ರೀ ಬಾಬುರಾವ್ ಚಿಂಚನಸೂರು, ಜವಳಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವರು.<br><br>ಅಧ್ಯಕ್ಷತೆ:<br><br>ಶ್ರೀ ಆರ್. ರೋಷನ್ ಬೇಗ್, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ವಾರ್ತಾ ಮತ್ತು ಹಜ್ ಸಚಿವರು.<br><br>ಮುಖ್ಯ ಅತಿಥಿಗಳು:<br><br>ಶ್ರೀ ಆರ್. ವಿ. ದೇಶಪಾಂಡೆ, ಉನ್ನತ ಶಿಕ್ಷಣ ಸಚಿವರು.<br><br>ಶ್ರೀ ಕೃಷ್ಣಭೈರೇಗೌಡ, ಕೃಷಿ ಸಚಿವರು. | **07-5-2015**<br>ಗುರುವಾರ<br>ಬೆಳಿಗ್ಗೆ<br>10–00 ಗಂಟೆಗೆ | ಸರ್ಕಾರಿ ಶ್ರೀ ಕೃಷ್ಣರಾಜೇಂದ್ರ ಸಿಲ್ವರ್ ಜ್ಯೂಬಿಲಿ ಟೆಕ್ನಾಲಾಜಿಕಲ್ ಇನ್ಸಿಟ್ಯೂಟ್ ಆವರಣ, ಕೆ.ಆರ್. ಸರ್ಕಲ್, ಬೆಂಗಳೂರು –560 001 |
| 2. | ಬೆಂಗಳೂರು ಹಾತ್ ಸಾಂಸ್ಕೃತಿಕ ಸಪ್ತಾಹ: (ಬಿ.ಎಂ.ಆರ್.ಸಿ.ಎಲ್.)<br>ಮಕ್ಕಳ ಯಕ್ಷಗಾನ : ಪ್ರಸಂಕ ಅಭಿಮನ್ಯು ವಧೆ. ಗೌತಮ ಮತ್ತು ಸಮೂಹದಿಂದ. | **07-5-2015**<br>ಗುರುವಾರ<br>ಸಂಜೆ<br>6–00 ಗಂಟೆಗೆ | ಬೆಂಗಳೂರು ಹಾತ್ ರಂಗಮಂದಿರ, ಸ್ವಾಮಿ ವಿವೇಕಾನಂದ ಮೆಟ್ರೋ ಸ್ಟೇಷನ್, ಹಳೇ ಮದ್ರಾಸ್ ರಸ್ತೆ, |

| | | | |
|---|---|---|---|
| | ಸಂಪರ್ಕ:<br>ಡಾ. ಕೆ. ಪ್ರಭಾಕರ್ ರಾವ್,<br>ಮುಖ್ಯ ಆಡಳಿತಾಧಿಕಾರಿ,<br>ಮೆಟ್ರೋ<br>ಮೊಬೈಲ್ 9449874553 | | ಬೆಂಗಳೂರು – 560 038. |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

**ಬೆಂಗಳೂರಿಗೆ ಮಹಾತ್ಮ ಗಾಂಧೀಜಿ ಮೊದಲ ಭೇಟಿ ನೆನಪಿನ**

# ವಿಶೇಷ ಅಂಚೆ ಲಕೋಟೆ ಬಿಡುಗಡೆ ಸಮಾರಂಭ

ಬೆಂಗಳೂರು, ಮೇ 6 (ಕರ್ನಾಟಕ ವಾರ್ತೆ)

ರಾಜ್ಯ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯು ಭಾರತೀಯ ಅಂಚೆ ಇಲಾಖೆ ಸಹಯೋಗದೊಂದಿಗೆ ಹೊರತಂದಿರುವ ಬೆಂಗಳೂರಿಗೆ ಮಹಾತ್ಮ ಗಾಂಧೀಜಿಯವರ ಮೊದಲ ಭೇಟಿಯ ನೆನಪಿನ ವಿಶೇಷ ಅಂಚೆ ಲಕೋಟೆ ಬಿಡುಗಡೆ ಸಮಾರಂಭವು ಮೇ 8 ರಂದು ಬೆಳಿಗ್ಗೆ 11–00 ಗಂಟೆಗೆ ಬೆಂಗಳೂರಿನ ಅರಮನೆ ರಸ್ತೆಯ ಸೆಂಟ್ರಲ್ ಕಾಲೇಜು ಆವರಣದ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆಯಲಿದೆ.

ಅಂಚೆ ಲಕೋಟೆಯನ್ನು ರಾಜ್ಯದ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಬಿಡುಗಡೆ ಮಾಡುವರು. ಸಮಾರಂಭದಲ್ಲಿ ರಾಜ್ಯ ವಾರ್ತಾ ಹಾಗೂ ಹಜ್ ಸಚಿವ ಶ್ರೀ ಆರ್. ರೋಷನ್ ಬೇಗ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಶ್ರೀ ಎಚ್. ಕೆ. ಪಾಟೀಲ್, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಶ್ರೀಮತಿ ಉಮಾಶ್ರೀ ಹಾಗೂ ಕರ್ನಾಟಕ ವಲಯ ಪೋಸ್ಟ್ ಮಾಸ್ಟರ್ ಜನರಲ್ ಶ್ರೀ ಎಂ.ಎಸ್. ರಾಮಾನುಜನ್ ಉಪಸ್ಥಿತರಿರುವರು.

ಬಾಬು:ಜಿಪಿಆರ್.

## ಪಠ್ಯಪುಸ್ತಕ ಪರಿಷ್ಕರಣಾ ಸಮಿತಿ ಅಧ್ಯಕ್ಷರಾಗಿ ಪ್ರೊ॥ ಬರಗೂರು ರಾಮಚಂದ್ರಪ್ಪ

**ಬೆಂಗಳೂರು, ಮೇ 6 (ಕರ್ನಾಟಕ ವಾರ್ತೆ)**

ಕರ್ನಾಟಕ ಸರ್ಕಾರವು 'ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005' ರ ಮಾರ್ಗಸೂಚಿಯಂತೆ ರಾಜ್ಯ ಪಠ್ಯಕ್ರಮದಲ್ಲಿ ಸಮಗ್ರ ಪರಿಷ್ಕರಣೆ ಮಾಡಲು ರಚಿಸಲಾದ ಪಠ್ಯಪುಸ್ತಕ ಪರಿಷ್ಕರಣಾ ಸಮಿತಿಗಳ ಅಧ್ಯಕ್ಷರನ್ನಾಗಿ ಸಾಹಿತಿ ಪ್ರೊ॥ ಬರಗೂರು ರಾಮಚಂದ್ರಪ್ಪ ಇವರನ್ನು ನೇಮಕ ಮಾಡಿದೆ.

ಸರ್ಕಾರವು ವಿವಿಧ ಪಠ್ಯವಿಷಯಗಳಿಗೆ ಸಂಬಂಧಿಸಿದಂತೆ 185 ಜನ ವಿಷಯ ತಜ್ಞರನ್ನು ಒಳಗೊಂಡ 27 ಸಮಿತಿಗಳನ್ನು ರಚಿಸಿದ್ದು, ಈ ಎಲ್ಲಾ ಸಮಿತಿಗಳ ಸರ್ವಾಧ್ಯಕ್ಷರಾಗಿ ಪ್ರೊ. ಬರಗೂರು ರಾಮಚಂದ್ರಪ್ಪನವರು ಕಾರ್ಯನಿರ್ವಹಿಸಲಿದ್ದಾರೆ. '2005 ರ ರಾಷ್ಟ್ರೀಯ ಪಠ್ಯಕ್ರಮ' ಚೌಕಟ್ಟಿನ ಮಾರ್ಗಸೂಚಿಯಂತೆ ರಾಜ್ಯ ಪಠ್ಯಕ್ರಮದಲ್ಲಿ ಸಮಗ್ರ ಪರಿಷ್ಕರಣೆ ಮಾಡುವುದು ತಜ್ಞರ ಸಮಿತಿಗಳ ಕೆಲಸವಾಗಿದ್ದು, ಪ್ರೊ.ಬರಗೂರು ರಾಮಚಂದ್ರಪ್ಪನವರ ನೇತೃತ್ವದಲ್ಲಿ ಈ ಕೆಲಸವು ನಡೆಯಲಿದೆ. ಅಧ್ಯಕ್ಷರ ಕಛೇರಿಯು ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಡಿ.ಎಸ್.ಇ.ಆರ್.ಟಿ ಕಟ್ಟಡ, ಬನಶಂಕರಿ 3ನೇ ಹಂತ, ಹೊಸಕೆರೆಹಳ್ಳಿ, ಬೆಂಗಳೂರು-85 ಇಲ್ಲಿ ಕಾರ್ಯನಿರ್ವಹಿಸಲಿದೆ.

**ವಾರ್ತಾ ವಿಶೇಷ :**

# ನಗರಕ್ಕೆ ಹಣ್ಣುಗಳ ರಾಜ ಮಾವಿನ ದಾಳಿ

**ಬೆಂಗಳೂರು ನಗರಕ್ಕೆ ವಸಂತ ಮಾಸದ ಜೊತೆಗೆ ಹಣ್ಣುಗಳ ರಾಜ ಮಾವಿನ ಹಣ್ಣಿನ ಆಗಮನವಾಗಿದೆ. ನಗರದೆಲ್ಲೆಡೆ ಮಾವಿನ ಕಂಪು ಪಸರಿಸಿದೆ. ಉಪ್ಪಿನ ಕಾಯಿ, ತೊಕ್ಕು ಇತ್ಯಾದಿಗೆ ಬಳಸುವ ಮಿಡಿ, ಆಮ್ಲೆಟ್ ಹಾಗೂ ಇನ್ನಿತರ ಮಾವಿನ ಕಾಯಿಗಳು ಮಾರುಕಟ್ಟೆಗೆ ಬಂದಿವೆ. ಜೊತೆ ಜೊತೆಗೆ ಹಣ್ಣಿನ ರಾಜ ಮಾವಿನ ಕಂಪು ಎಲ್ಲೆಡೆ ಹರಡಿದೆ. ರುಚಿ ರುಚಿಯಾದ ಮಾವುಕೊಳ್ಳಲು ನಗರದ ಗ್ರಾಹಕರು ಧಾವಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಗರದಲ್ಲಿ ದೊರಕುವ ವಿವಿಧ ಮಾವಿನ ಹಣ್ಣಿನ ಪರಿಚಯ ನೀಡಲಾಗುತ್ತಿದೆ.**

**<u>ಬಾದಾಮಿ (ಆಲ್ಫೋನ್ಸೊ:ಆಪೂಸ್):</u> ವಿಶ್ವದಲ್ಲಿಯೇ ಅಧಿಕ ಬೇಡಿಕೆ ಇರುವ ತಳಿಗಳಲ್ಲಿ ಒಂದಾಗಿದೆ. ಹಣ್ಣುಗಳ ಸರಾಸರಿ ತೂಕ 220 ಗ್ರಾಂ ಇದ್ದು ಹಣ್ಣುಗಳು ಆಕರ್ಷಕವಾಗಿವೆ. ತಿರುಳು ರುಚಿಯಾಗಿದ್ದು, ಸಕ್ಕರೆ ಮತ್ತು ಆಮ್ಲದ ಪ್ರಮಾಣವು ಸರಿಯಾದ ಅನುಪಾತದಲ್ಲಿ ಇರುವುದರಿಂದ ಈ ಹಣ್ಣಿನ ರುಚಿಯೂ ಅಧಿಕವೆಂದು ಹೇಳಬಹುದು. ಹಣ್ಣಿನ ತಿರುಳು ಸುವಾಸನ ಭರಿತವಾಗಿದ್ದು ಹಣ್ಣುಗಳನ್ನು ಕಟಾವಿನ ನಂತರ 20-25 ದಿನಗಳವರೆಗೆ ಕೆಡದಂತೆ ಇಡಬಹುದು. ಈ ತಳಿಯ ಹಣ್ಣುಗಳನ್ನು ಕ್ಯಾನಿಂಗ್ ಮಾಡಲು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸಲಾಗುತ್ತಿದೆ. ನಮ್ಮ ದೇಶದಿಂದ ರಫ್ತು ಆಗುವ ಶೇಕಡಾ 50 ರಷ್ಟು ಮಾವಿನ ಹಣ್ಣಿನಲ್ಲಿ ಈ ತಳಿಯ ಹಣ್ಣುಗಳು ಸೇರಿವೆ. ಈ ತಳಿಯನ್ನು ಎಲ್ಲಾ ಮಾವು ಬೆಳೆಯುವ ಪ್ರದೇಶದಲ್ಲಿ ಬೆಳೆಯಲು ಸಾಧ್ಯವಿಲ್ಲ. ಆದರೆ**

ಕೆಲವೊಂದು ಪ್ರದೇಶದಲ್ಲಿ ಮಾತ್ರ ಸಮೃದ್ಧವಾಗಿ ಬೆಳೆಯಬಹುದು. ಈ ತಳಿಗೆ ಗರ್ಭ ಅಥವಾ ಸ್ಪಂಜು ಅಂಗಾಂಶದ ಬಾಧೆ ಹೆಚ್ಚು. ಬೂದಿ ರೋಗ ಮತ್ತು ಜಿಗಿ ಹುಳದ ಬಾಧೆಯೂ ಸಹ ಈ ತಳಿಯಲ್ಲಿ ಅಧಿಕ.

ರಸಪುರಿ (ಪೈರಿ): ಈ ಮರದ ಗಾತ್ರವು ದೊಡ್ಡದಾಗಿದ್ದು, 2 ವರ್ಷಕ್ಕೊಮ್ಮೆ ಇಳುವರಿ ಕೊಡುವ ತಳಿ. ಹಣ್ಣುಗಳ ಗಾತ್ರ ಸಾಧಾರಣವಾಗಿದ್ದು, ಕೆಂಪು ಬಣ್ಣದಿಂದ ಕೂಡಿದ್ದು, ಆಕರ್ಷಕವಾಗಿದೆ. ಈ ಹಣ್ಣಿನ ರುಚಿಯೂ ಉತ್ತಮವಾಗಿದ್ದು, ತಿರುಳು ರಸಭರಿತವಾಗಿದೆ. ಈ ಹಣ್ಣಿಗೆ ಮಾವಿನ ನೊಣದ ಬಾಧೆ ಅಧಿಕ.

ಬಂಗನಪಲ್ಲಿ (ಬೆನಿಷಾನ್) : ಶುಷ್ಕ ವಾತಾವರಣದಲ್ಲಿ ಚೆನ್ನಾಗಿ ಬೆಳೆಯುವ ಮಧ್ಯಮ ಗಾತ್ರದ ಬೆಳೆ. ಈ ತಳಿಯ ಹಣ್ಣು ಹೊಂಬಣ್ಣದ ಹೊಳಪಿನಿಂದ ಕೂಡಿರುವ ದೊಡ್ಡ ಗಾತ್ರದ ಹಣ್ಣು. ನಾರು ಇರದ ತುಂಬಾ ರುಚಿಕರವಾದ ಹಣ್ಣಾಗಿದೆ.

ತೋತಾಪುರಿ (ಬೆಂಗಳೂರು) : ಪ್ರತಿ ವರ್ಷವೂ ತಪ್ಪದೇ ಇಳುವರಿಯನ್ನು ಕೊಡುವ ತಳಿಯಾಗಿದ್ದು, ಹಣ್ಣುಗಳ ಗಾತ್ರ ದೊಡ್ಡದಾಗಿದ್ದು, ಇಳುವರಿಯೂ ಸಹ ಜಾಸ್ತಿಯಾಗಿರುತ್ತದೆ. ಜ್ಯೂಸ್ ತಯಾರು ಮಾಡಲು ಈ ಹಣ್ಣನ್ನು ಯಥೇಚ್ಚವಾಗಿ ಉಪಯೋಗಿಸುವರು. ಹಣ್ಣಿನ ಸಿಪ್ಪೆ ದಪ್ಪವಾಗಿದ್ದು, ಕಟಾವಿನ ನಂತರ ಕೆಡದಂತೆ ಒಂದು ತಿಂಗಳವರೆಗೆ ಇಡಬಹುದು. ಈ ತಳಿಯು ಸಹ ಮಾವಿನ ಓಟೆ ಮೂತಿ ಹುಳುವಿನ ಭಾದೆಗೆ ಹೆಚ್ಚು ತುತ್ತಾಗುತ್ತದೆ.

ಮಲಗೋವಾ : ಹಣ್ಣಿನ ಗಾತ್ರ ದೊಡ್ಡದು. ಆದರೆ ಮರ ಒಂದರಿಂದ ಹಣ್ಣುಗಳ ಇಳುವರಿ ಸಂಖ್ಯೆ ಕಡಿಮೆ. ಹಣ್ಣುಗಳ ಎರಡು ಭುಜಗಳು ಉಬ್ಬಿದ್ದು ಆಕರ್ಷಕವಾಗಿದೆ. ಈ ತಳಿಯಲ್ಲಿ ತಿರುಳಿನ ಅಂಶ ಜಾಸ್ತಿ ಮತ್ತು ಓಟೆ ತೆಳುವಾಗಿರುತ್ತದೆ. ತಿರುಳು ಅತ್ಯಂತ ರುಚಿಯಾಗಿದ್ದು, ಹಣ್ಣುಗಳು ತಿನ್ನಲು ಯೋಗ್ಯವಾಗಿರುತ್ತದೆ.

ದಶೇರಿ: ಈ ತಳಿ ಉತ್ತರ ಭಾರತದಲ್ಲಿ ಬಹಳ ಜನಪ್ರಿಯವಾಗಿದೆ. ಹಣ್ಣಿನ ತಿರುಳು ನಾರಿನಿಂದ ಮುಕ್ತವಾಗಿದ್ದು, ರುಚಿಕರವಾಗಿದೆಯಲ್ಲದೆ ಸುವಾಸನೆಯಿಂದ ಕೂಡಿದೆ. ಹಣ್ಣು ದೀರ್ಘಕಾಲದ ಶೇಖರಣೆ ಗುಣ ಹೊಂದಿದೆ.

ಕೇಸರ್: ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳ ವಾಣಿಜ್ಯ ತಳಿಯಾದ ಈ ತಳಿಯನ್ನು ಕರ್ನಾಟಕದಾದ್ಯಂತ ಸಮೃದ್ದಿಯಾಗಿ ಬೆಳೆಯುವರು. ಹಣ್ಣು ಆಕರ್ಷಕವಾಗಿದ್ದು ಎರಡು ಭುಜಗಳೂ ಒಂದೇ ಸಮನಾಗಿದ್ದು ಮಾಗಿದ ಹಣ್ಣುಗಳು ಹೊಳೆಯುವ ಹಳದಿ ಬಣ್ಣದಿಂದ ಕೂಡಿದ್ದು, ಹೆಚ್ಚು ಆಕರ್ಷಕವಾಗಿರುತ್ತದೆ. ಇಳುವರಿ ಅಧಿಕ. ಹೆಚ್ಚು ಕಡಿಮೆ ಪ್ರತಿ ವರ್ಷವೂ ಇಳುವರಿಯನ್ನು ನಿರೀಕ್ಷಿಸಬಹುದು. ಹಣ್ಣಿನ ಗುಣಮಟ್ಟ ಅಧಿಕ ಮತ್ತು ಮಾರುಕಟ್ಟೆಯಲ್ಲಿ ಈ ತಳಿಗೆ ಬೇಡಿಕೆ ಹೆಚ್ಚು.

ಆಮ್ಲೆಟ್ : ಉಪ್ಪಿನ ಕಾಯಿಗೆ ವಿಶೇಷವಾಗಿ ಉಪಯೋಗಿಸುವ ಈ ತಳಿ ಗಾತ್ರದಲ್ಲಿ ದೊಡ್ಡದಾಗಿದ್ದು, ಆಕರ್ಷಣೀಯ ಕಾಂತಿಯಿಂದ ಕೂಡಿರುತ್ತದೆ.

ಐಶ್ವರ್ಯ : ತೋಟಗಾರಿಕೆ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಬೆಂಗಳೂರಿನಿಂದ ಬಿಡುಗಡೆ ಮಾಡಿದ ಸುಧಾರಿತ ಆಲ್ಫೋನ್ಸೊ ತಳಿಯಿದು. ಅಧಿಕ ಇಳುವರಿ ಕೊಡುವ ತಳಿ (10.00 ಟನ್ ಹೆಕ್ಟೇರಿಗೆ) ಹಣ್ಣುಗಳ ಗಾತ್ರ

ಸಾಧಾರಣವಾಗಿದ್ದು, ಆಕರ್ಷಕ, ಅಧಿಕ ರುಚಿ ಮತ್ತು ಶೇಕಡಾ 75.4 ರಷ್ಟು ತಿರುಳಿನಿಂದ ಕೂಡಿದೆ. ಈ ತಳಿಯು ಹಣ್ಣುಗಳ ಸ್ಪಂಜು ಅಂಗಾಂಶವೆಂಬ ಶಾರೀರಿಕ ತೊಂದರೆಯಿಂದ ಮುಕ್ತವಾಗಿರುತ್ತದೆ.

ನೀಲಂ: ದಕ್ಷಿಣ ಭಾರತದ ವಾಣಿಜ್ಯ ತಳಿಗಳಲ್ಲಿ ಮುಖ್ಯವಾದ ಒಂದು ತಳಿ. ಈ ತಳಿಯು ಪ್ರತಿ ವರ್ಷವೂ ಇಳುವರಿ ಕೊಡುತ್ತದೆ ಮತ್ತು ಕಟಾವಿಗೆ ತಡವಾಗಿ ಬರುವುದರಿಂದ (ಜೂನ್, ಜುಲೈ) ಮಾರುಕಟ್ಟೆಯಲ್ಲಿ ಅಧಿಕ ಧಾರಣೆಯನ್ನು ನಿರೀಕ್ಷಿಸಬಹುದು. ಈ ಹಣ್ಣಿನ ಸಿಪ್ಪೆಯು ತೊಗಲಿನಂತಿದ್ದು, ಕಟಾವಿನ ನಂತರ ಒಂದು ತಿಂಗಳವರೆಗೆ ಕೆಡದಂತೆ ಇಡಬಹುದು. ಈ ಹಣ್ಣಿನ ರುಚಿಯು ಸ್ವಲ್ಪ ಕಡಿಮೆ ಮತ್ತು ಮಾವಿನ ಓಟೆ ಕೊರೆತ ಬಾಧೆಗೆ ತುತ್ತಾಗುತ್ತದೆ.

ಮಲ್ಲಿಕಾ: ಈ ಹೈಬ್ರಿಡ್ ತಳಿಯನ್ನು ನೀಲಂ ಮತ್ತು ದಶೇರಿ ತಳಿಗಳ ಸಂಕರಣದಿಂದ ಅಭಿವೃದ್ಧಿಪಡಿಸಲಾಗಿದೆ. ಈ ಹೈಬ್ರಿಡ್ ತಳಿ ಪ್ರತಿ ವರ್ಷವೂ ಇಳುವರಿ ಕೊಡುವುದಲ್ಲದೆ ಅಧಿಕ ಇಳುವರಿಯನ್ನು ಕೊಡುತ್ತದೆ. ಗಾತ್ರದಲ್ಲಿ ದೊಡ್ಡದಾಗಿದ್ದು (ಸರಾಸರಿ ತೂ 300 ಗ್ರಾಂ) ನೋಡಲು ಆಕರ್ಷಕವಾಗಿರುತ್ತದೆ. ಹಣ್ಣುಗಳು ತಿನ್ನಲು ರುಚಿಯಾಗಿದ್ದು (ಶೇಕಡಾ 25 ಸಕ್ಕರೆ ಅಂಶ) ತಿರುಳು ನಾರಿನಿಂದ ಮುಕ್ತವಾಗಿದೆ. ಹಣ್ಣು ಒಂದರಿಂದ ಶೇ 75 ರಷ್ಟ ತಿರುಳನ್ನು ಪಡೆಯಬಹುದು. ಈ ಹಣ್ಣಿನ ಸಿಪ್ಪೆಯು ದಪ್ಪವಾಗಿದ್ದು, ಹಣ್ಣುಗಳ ಕಟಾವಿನ ನಂತರ ಇಪ್ಪತ್ತೈದು ದಿನಗಳ ತನಕ ಕೆಡದಂತೆ ಇಡಬಹುದು. ಈ ಹೈಬ್ರಿಡ್ ತಳಿಯಲ್ಲಿ ಫಿನಾಲ್ ಮತ್ತು ಪಾಲಿಫಿನಾಲ್ ಎಂಬ ಸಂಯುಕ್ತ ವಸ್ತು ಅಧಿಕವಾಗಿರುವುದರಿಂದ ಬೂದಿರೋಗ ಮತ್ತು ಮಾವಿನ ಜಾಸಿಡ್ಸ್ (ಜಿಗಿ ಹುಳು) ಬಾಧೆಯನ್ನು ತಡೆಯುವ ಶಕ್ತಿಯನ್ನು ಹೊಂದಿದೆ.

ಆಮ್ರಪಾಲಿ : ಈ ಹೈಬ್ರಿಡ್ ತಳಿಯನ್ನು ದಶೇರಿ ಮತ್ತು ನೀಲಂ ತಳೀಗಳ ಸಂಕರಣದಿಂದ ಅಭಿವೃದ್ಧಿಪಡಿಸಲಾಗಿದೆ. ಈ ತಳಿಯ ಗಿಡಗಳು ಕುಬ್ಜವಾಗಿರುವುದರಿಂದ ಎಕರೆ ಒಂದರಲ್ಲಿ ಹೆಚ್ಚು ಗಿಡಗಳನ್ನು ನೆಡಬಹುದು. ಸಾಮಾನ್ಯ ತಳಿಗಳನ್ನು ಒಂದು ಹೆಕ್ಟೇರ್ ಪ್ರದೇಶದಲ್ಲಿ 70-100 ಗಿಡಗಳನ್ನು ನೆಟ್ಟರೆ ಈ ತಳಿಯ ಗಿಡಗಳನ್ನು 175 ರವರೆಗೂ ನೆಡಬಹುದು. ಹೀಗೆ ಅಧಿಕ ಸಂಖ್ಯೆಯಲ್ಲಿ ಗಿಡಗಳನ್ನು ನೆಟ್ಟಲ್ಲಿ ಇಂದು ಒಂದು ಹೆಕ್ಟೇರ್ ಪ್ರದೇಶದಿಂದ 22-24 ಟನ್‌ಗಳಷ್ಟು ಹಣ್ಣುಗಳ ಇಳುವರಿಯನ್ನು ನಿರೀಕ್ಷಿಸಬಹುದು. ಈ ತಳಿಯು ಸಹ ಪ್ರತಿ ವರ್ಷವೂ ಇಳುವರಿಯನ್ನು ಕೊಡುತ್ತದೆ. ಹಣ್ಣುಗಳ ಗಾತ್ರ ಚಿಕ್ಕದಾದರೂ ಹೆಚ್ಚಿನ 'ಎ' ಜೀವಸತ್ವವನ್ನು ಹೊಂದಿದೆ.

ರತ್ನ : ಈ ಹೈಬ್ರಿಡ್ ತಳಿಯನ್ನು ರತ್ನಗಿರಿ ಬಾದಾಮಿ ಮತ್ತು ನೀಲಂ ತಳಿಗಳ ಸಂಕರಣದಿಂದ ಮಹಾರಾಷ್ಟ್ರ ರಾಜ್ಯದ ಕೊಂಕಣ ಕೃಷಿ ವಿದ್ಯಾಪೀಠ, ದಾಪೋಲಿಯಿಂದ ಬಿಡುಗಡೆ ಮಾಡಲಾಗಿದೆ. ಈ ತಳಿಯೂ ಸಹ ಪ್ರತಿ ವರ್ಷವೂ ಅಧಿಕ ಇಳುವರಿಯನ್ನು ಕೊಡುತ್ತದೆ. ಈ ತಳಿಗೆ ಗರ್ಭ ಅಥವಾ ಸ್ಪಂಜು ಅಂಗಾಂಶದ ಬಾಧೆ ನಿರೋಧಿಸುವ ಶಕ್ತಿ ಇದೆ.

ಸಿಂಧು : ಇದು ರತ್ನ ಮತ್ತು ಬಾದಾಮಿಯ ಸಂಕರಣ ತಳಿ. ಇದು ಮಧ್ಯಮ ಗಾತ್ರದ ಹಣ್ಣನ್ನು ಹೊಂದಿದ್ದು ಓಟೆ ಬಹಳ ತೆಳುವಾಗಿರುವುದರಿಂದ 'ಬೀಜರಹಿತ' (ಸೀಡ್‌ಲೆಸ್) ತಳಿ ಎಂದು ಕರೆಯಲಾಗುತ್ತದೆ. ಇದು ಪ್ರತಿ ವರ್ಷ ಫಲ ಕೊಡುತ್ತದೆ. ತಿರುಳು ರಹಿತವಾಗಿದ್ದು, ಸ್ಪಾಂಜಿನ ಅಂಗಾಂಶವನ್ನು ಹೊಂದಿರುವುದಿಲ್ಲ. ಹಣ್ಣುಗಳು ಹಳದಿ ಬಣ್ಣವಿದ್ದು ಮರಗಳೂ ಕುಬ್ಜವಾಗಿರುತ್ತದೆ.

ಇವೆಲ್ಲ ಮಾವಿನ ತರಹೆವಾರಿಗಳು ಮಾರುಕಟ್ಟೆಯಿಂದ ಮಾವನ್ನು ತಂದಕೂಡಲೇ ಅರ್ಧಗಂಟೆ ತಣ್ಣೀರಿನಲ್ಲಿ ನೆನಸಿ, ಚೆನ್ನಾಗಿ ತೊಳೆದು, ಒಣ ಬಟ್ಟೆಯಲ್ಲಿ ಒರೆಸಿ ಉಪಯೋಗಿಸುವುದು ಒಳ್ಳೆಯದು. ಮಾವಿನ ಹಣ್ಣನ್ನು ಹಾಗೆಯೇ ತಿನ್ನಲು ರುಚಿಯಾಗಿರುತ್ತದೆ. ಜೊತೆಗೆ ಮಾವಿನ ಹಣ್ಣಿನ ಜ್ಯೂಸ್ ಸೀಕರಣೆ, ಹಣ್ಣಿನ

ಸಲಾಡ್ ಇತ್ಯಾದಿ ಮೂಲಕವು ಬಳಸಬಹುದು. ಅಲ್ಲದೆ, ಉತ್ತರ ಕನ್ನಡ, ಉಡುಪಿ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ದೊರಕುವ " ಅಪ್ಪೆ ಮಿಡಿ " ಉಪ್ಪಿನಕಾಯಿ ತಿಂದು ನಾಲಿಗೆ ಚಪ್ಪರಿಸಿ.

– ಮಂಜುನಾಥಬಾಬು ಟಿ. ಸಿ
ಸಹಾಯಕ ನಿರ್ದೇಶಕರು

ಬಾಬು:ಜಿಪಿಆರ್.